


ಸರ್ವೆ (**National Rapid Assessment Survey of Drug Addiction**) ಪ್ರಕಾರ ವ್ಯಸನ ಹಾಗೂ ದುರ್ಬಳಕೆಯ ಒಟ್ಟು ಪ್ರಮಾಣದಲ್ಲಿ ಶೇಕಡಾ ಹತ್ತರಷ್ಟು ಜನ ಈ ರೀತಿಯ ವೈದ್ಯಕೀಯ ಮಾತ್ರೆಗಳ ದುರ್ಬಳಕೆಯಲ್ಲಿ ತೊಡಗಿಕೊಂಡಿದ್ದರು. ಇದರ ಪ್ರಮಾಣ ದಿನೇ ದಿನೇ ಹೆಚ್ಚುತ್ತಿದ್ದು ವೈದ್ಯರು ಹಾಗೂ ಪರಿಣಿತರು ಇದನ್ನು ಸಾಂಕ್ರಾಮಿಕ ಮಟ್ಟದ ಪಿಡುಗು ಎಂದೂ ಅಭಿಪ್ರಾಯಪಟ್ಟಿದ್ದಾರೆ.

ಈ ರೀತಿಯ ವೈದ್ಯಕೀಯ ಔಷಧಿಗಳ ದುರ್ಬಳಕೆಯಲ್ಲಿ ಎರಡು ದೊಡ್ಡ ರೀತಿಯ ಸಮಸ್ಯೆಗಳು ಇರುವುದನ್ನು ಗಮನಿಸಬಹುದು. ಮೊದಲನೆಯದು ವೈದ್ಯಕೀಯ ಚಿಕಿತ್ಸಾ ಪದ್ಧತಿಯಿಂದಲೇ ಉದ್ಭವಿಸಿದ ಸಮಸ್ಯೆಗಳು. ಅಂದರೆ ವೈದ್ಯರಾದವರು ರೋಗಿಯ ಕಾಯಿಲೆ– ಕಸಾಲೆ ನೋಡಿ ಅದಕ್ಕೆ ಅನುಗುಣವಾಗಿ, ಕಾನೂನಿನ ಚೌಕಟ್ಟಿನ ಒಳಗೆ ಇರುವ, ಸಾಮಾಜಿಕ ಜೀವನದಲ್ಲಿ ನಿಷೇಧವಲ್ಲದ ಔಷಧಿಗಳನ್ನೇ ಚೀಟಿಯಲ್ಲಿ ಸೂಚಿಸುತ್ತಾರೆ. ಇದನ್ನು ಯಾರು ಬೇಕಾದರೂ, ಅಂದರೆ ನಿಜವಾದ ಸಮಸ್ಯೆ ಇರುವವರಿಂದ ಹಿಡಿದು, ಕುಂಟು ನೆಪ ಮಾಡಿಕೊಂಡು ವೈದ್ಯರ ಬಳಿ ಹೋಗಿ ಮಾತ್ರೆ ಕೇಳುವವರೂ ಬಳಸಿಕೊಳ್ಳಬಹುದು. ಒಂದೇ ಚೀಟಿಯನ್ನು ಎರಡು ಮೂರು ಸಲ ಮೆಡಿಕಲ್ಸ್‌ನಲ್ಲಿ ತೋರಿಸಿ, ಜಾಸ್ತಿ ಪ್ರಮಾಣದಲ್ಲಿ ಖರೀದಿಸಿಯೂ ಸೇವಿಸಬಹುದು! ಕೆಲವರು ಒಂದೇ ಸಮಸ್ಯೆಯನ್ನು ಹತ್ತಾರು ವೈದ್ಯರಲ್ಲಿ ತೋರಿಸಿ, ತಮಗೆ ಬೇಕಾದ ಮಾತ್ರೆಯನ್ನು ಕಾಡಿ – ಬೇಡಿ ಪಡೆಯುವವರಿದ್ದಾರೆ. ಇನ್ನು ಕೆಲವರು ಕುಟುಂಬದ ಸದಸ್ಯರಿಂದ, ಪರಿಚಿತರಿಂದ ವೈದ್ಯರ ಚೀಟಿ ತೆಗೆದುಕೊಂಡು ಔಷಧಿಗಳನ್ನು ಖರೀದಿಸಿ ಬಳಸುವವರು. ಇಂಥವರನ್ನು ಕಾನೂನುಬಾಹಿರವಾಗಿ ಮಾತ್ರೆ ಸೇವಿಸುವವರು ಎನ್ನುವಂತಿಲ್ಲ. ಇತ್ತೀಚೆಗೆ ಆನ್‌ಲೈನ್‌ನಲ್ಲಿ ಔಷಧಿಗಳನ್ನು ಖರೀದಿಸುವ ಇಂತಹವರ ಸಂಖ್ಯೆಯೂ ಹೆಚ್ಚಿದೆ.

ಎರಡನೆಯ ರೀತಿಯ ಸಮಸ್ಯೆ ಎಂದರೆ, ಈ ರೀತಿಯ ಔಷಧಿಗಳ ಬಳಕೆಯಲ್ಲಿ ಒಂದು ನಿಖರವಾದ ಗೆರೆ ಎಳೆದು, ಸರಹದ್ದುಗಳನ್ನು ಹಾಕೋದು ತುಂಬಾ ಕಷ್ಟಕರ ಕೆಲಸ. ಅವಶ್ಯಕತೆಯ ಬಳಕೆ, ಪದೇ ಪದೇ ದುರ್ಬಳಕೆ, ಚಟ ಎನ್ನುವಷ್ಟರ ಮಟ್ಟಿಗೆ ಬೆಳೆಯುವ ವ್ಯಸನ ಅಥವಾ ಅವಲಂಬಿತ ಸ್ಥಿತಿ.. ಇವುಗಳ ನಡುವಣ ರೇಖೆಗಳು ಅಸ್ಪಷ್ಟ ಹಾಗೂ ನಿಖರವಿಲ್ಲ.